ಇಂದು ದಿ:**13-03-2026** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎನ್.ಕೆ.ವಿ ವಕೀಲರಿಂದ ವಾದಿಗಳ ಪರಃ**

ನಾನು 4 ನೇ ತರಗತಿಯವರೆಗೆ ಶಾಲೆ ಕಲಿತ್ತಿದ್ದೇನೆ, ಆದರೆ ಓದಲು ಮತ್ತು ಬರೆಯಲು ಬರುವುದಿಲ್ಲ. ನನ್ನ ಸ್ವಂತ ಊರು ಚನ್ನಗಿರಿ ತಾಲೂಕಿನ ಕಾರಿಗನೂರು ಎಂದರೆ ಸರಿ. ಸಾಕ್ಷಿ ಆದರೆ ಹುಟ್ಟಿ ಬೆಳೆದಿದ್ದು ಭಾನುವಳ್ಳಿ ಎಂದು ಹೇಳುತ್ತಾರೆ. ನಾನು ಭಾನುವಳ್ಳಿಯಲ್ಲಿ ಹುಟ್ಟಿ ಬೆಳೆದಿರುತ್ತೇನೆ. ವಾದಿ ನನಗೆ ಮಾವ ಆಗಬೇಕು. ನನ್ನ ತಾಯಿಯ ಹೆಸರು ಶಿವಮ್ಮ ಎಂದು ಇರುತ್ತದೆ. ನನ್ನ ತಾಯಿಯ ತಂದೆಯ ಹೆಸರು ಡಿ.ಬಸಪ್ಪ ಎಂದರೆ ಸರಿ. ಬಸಪ್ಪನ ತಂದೆಯ ಹೆಸರು ಬಸಲಿಂಗಪ್ಪ ಎಂದರೆ ಸರಿ. ಬಸಲಿಂಗಪ್ಪ ಈತನಿಗೆ 4 ಜನ ಮಕ್ಕಳು ಎಂದರೆ ಸರಿ. ಅವರೆಂದರೆ, ಮರಿಬಸಪ್ಪ, ಬಸಮ್ಮ, ಬಸಪ್ಪ ಮತ್ತು ಕೊಟ್ರಪ್ಪ ಎಂದರೆ ಸರಿ. ಮರಿಬಸಪ್ಪ ಇವನ ಮದುವೆ ಆಗಿರಲಿಲ್ಲ. ಬಸಮ್ಮ ಇವಳು ತೀರಿಕೊಂಡಿದ್ದಾಳೆ ಎಂದರೆ ಸರಿಯಲ್ಲ. ಸಾಕ್ಷಿ ಆಕೆಯನ್ನು ನ್ಯಾಮತಿ ಊರಿನಲ್ಲಿ ಮದುವೆ ಮಾಡಿಕೊಟ್ಟಿದ್ದರು. ಈಗ ಎಲ್ಲಿದ್ದಾಳೆ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ. ಬಸಮ್ಮ ತೀರಿಕೊಂಡಿದ್ದಾಳೆ ಎಂದರೆ ಸರಿಯಲ್ಲ.

ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬಸಮ್ಮ ತೀರಿಕೊಂಡಿದ್ದಾಳೆ ಎಂದು ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಬರೆಯಿಸಿದ್ದರೂ, ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೊಟ್ರಪ್ಪ ತೀರಿಕೊಂಡಿದ್ದಾನೆ ಎಂದರೆ ಸರಿ. ಆತನ ಮದುವೆ ಸಹ ಆಗಿರಲಿಲ್ಲ ಎಂದರೆ ಸರಿ. ಬಸಮ್ಮ ಜೀವಂತ ಇರುವ ಬಗ್ಗೆ ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ.

ನನ್ನ ಅಜ್ಜ ಬಸಪ್ಪನಿಗೆ 6 ಜನ ಮಕ್ಕಳು ಎಂದರೆ ಸರಿ. ಮೊದಲನೇಯವಳು

ಡಿ.ಜೆ. ಗದಿಗೆಮ್ಮ ಎಂದರೆ ಸರಿ. ನಂತರ ಡಿ.ಜೆ. ಬಸಲಿಂಗಪ್ಪ, ಮೂರನೇಯವನು ಡಿ.ಜೆ ಬಸವರಾಜಪ್ಪ ಅಂದರೆ 1 ನೇ ಪ್ರತಿವಾದಿ ಎಂದರೆ ಸರಿ. ಶಿವಮ್ಮ ನನ್ನ ತಾಯಿ. ಆಕೆ 3 ನೇ ಪ್ರತಿವಾದಿ ಎಂದು ಇದ್ದಳು ಎಂದರೆ ಸರಿ. ವಾದಿ ಬಸಪ್ಪನ 5 ನೇ ಮಗ ಎಂದರೆ ಸರಿ. ಕುಬೇಂದ್ರಪ್ಪ 6 ನೇ ಮಗ ಎಂದರೆ ಸರಿ. ಗದಿಗೆಮ್ಮ ತೀರಿಕೊಂಡಿದ್ದು, 2 ನೇ ಪ್ರತಿವಾದಿ ಆಕೆಯ ಮಗಳು ಎಂದರೆ ಸರಿ. 1 ನೇ ಪ್ರತಿವಾದಿಯ ಹೆಂಡತಿ ಎಂದರೆ 2 ನೇ ಪ್ರತಿವಾದಿ ಎಂದರೆ ಸರಿ. ಬಸಲಿಂಗಪ್ಪ ತೀರಿಕೊಂಡಿದ್ದು, 4(ಎ) ದಿಂದ 4(ಡಿ) ಅವರ ವಾರಸುದಾರರು ಎಂದರೆ ಸರಿ. ನನ್ನ ತಾಯಿ ಲಾಕ್‌ಡೌನ್ ನಲ್ಲಿ ತೀರಿಕೊಂಡರು. ನಾನು ಮತ್ತು 3(ಎ) ನನ್ನ ತಾಯಿಯ ವಾರಸುದಾರರು ಎಂದರೆ ಸರಿ. ಪ್ರತಿವಾದಿ 5(ಎ) ಮತ್ತು 5(ಬಿ) ಕುಬೇಂದ್ರಪ್ಪನ ವಾರಸುದಾರರು ಎಂದರೆ ಸರಿ.

**ವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.